ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 16–10–2017

# ಪತ್ರಿಕಾ ಅಮಂತ್ರಣ

1. **" ಆಯುರ್ವೇದ ದಿನಾಚರಣೆ–2017"**

**ಉದ್ಘಾಟನೆ:**
ಕೆ.ಆರ್. ರಮೇಶ್ ಕುಮಾರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

**ವಿಶೇಷ ಆಹ್ವಾನಿತರು:**
ಕೆ. ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಮತ್ತು ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು.

**ಅಧ್ಯಕ್ಷತೆ**
ದಿನೇಶ್ ಗುಂಡೂರಾವ್, ವಿಧಾನಸಭಾ ಸದಸ್ಯರು, ಗಾಂಧಿನಗರ ಕ್ಷೇತ್ರ ಶಾಸಕರು.

ದಿನಾಂಕ: 17–10–2017, ಮಂಗಳವಾರ ಸಮಯ: ಬೆಳಿಗ್ಗೆ 10.30 ಗಂಟೆಗೆ
ಸ್ಥಳ: ಆತ್ರೇಯ ಸಭಾಂಗಣ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ, ಬೆಂಗಳೂರು – 560 009.

## *ಪತ್ರಿಕಾ ಪ್ರಕಟಣೆ*

**ಸಂಖ್ಯೆ:193 /313**

## ಬೆಂಗಳೂರಿನ ಸಾರ್ವಜನಿಕರ ಸಮಸ್ಯೆಗಳ ತ್ವರಿತ ಪರಿಹಾರಕ್ಕಾಗಿ ಸಾಮಾಜಿಕ ಜಾಲತಾಣ ಮಾಧ್ಯಮ ಕೇಂದ್ರ ಉದ್ಘಾಟನೆ

**ಬೆಂಗಳೂರು, ಅಕ್ಟೋಬರ್ 16( ಕರ್ನಾಟಕ ವಾರ್ತೆ) :**

ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ಮೆಟ್ರೋ ರೈಲು ನಿಗಮ ಸಂಸ್ಥೆಗಳಿಗೆ ಸಂಬಂಧಿಸಿದ ದೈನಂದಿನ ಸಮಸ್ಯೆಗಳನ್ನು ಸಾರ್ವಜನಿಕರು ನೇರವಾಗಿ ತಮ್ಮ ದೂರುಗಳನ್ನು ಸಂಬಂಧಿಸಿದ ಫೇಸ್‌ಬುಕ್ ಮತ್ತು ಟ್ವಿಟರ್ ಮೂಲಕ ದಾಖಲಿಸಬಹುದು ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಅವರು ತಿಳಿಸಿದರು.

ನಗರದ ಅಲಿ ಅಸ್ಕರ್ ರಸ್ತೆಯಲ್ಲಿರುವ ಬಿ.ಎಂ.ಆರ್.ಡಿ. ಕಛೇರಿಯಲ್ಲಿ ಇಂದು ಈ ಐದು ಇಲಾಖೆಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲ ತಾಣ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು ಈ ಕೇಂದ್ರದ ಸ್ಥಾಪನೆಯಿಂದ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿರುವ ಸರ್ಕಾರಕ್ಕೆ ಸಾರ್ವಜನಿಕರು ತಮ್ಮ ದೈನಂದಿನ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು, ಸಾರ್ವಜನಿಕರು ಇದರ ಸದುಪಯೋಗ ಮಾಡಿಕೊಂಡಲ್ಲಿ ಬೆಂಗಳೂರು ನಗರ ಮತ್ತಷ್ಟು ಸುಂದರ ಹಾಗೂ ಅಭಿವೃದ್ಧಿ ನಗರವಾಗಲಿದೆ ಎಂದು ಹೇಳಿದರು.

ಈ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ಸಿಬ್ಬಂದಿಗಳು ಸಾರ್ವಜನಿಕರು ನೀಡುವ ದೂರುಗಳನ್ನು ಕೂಡಲೇ ದಾಖಲಿಸಿ ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ಸಂಸ್ಥೆಗಳಿಗೆ ವರ್ಗಾಯಿಸುತ್ತಾರೆ. ನಂತರ ಆಯಾ ಸಂಸ್ಥೆಗಳ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರ ಗಮನಕ್ಕೆ ತಂದು ಸಮಸ್ಯೆಗೆ ಪರಿಹಾರ ಹುಡುಕಿ ನಂತರ ಕೇಂದ್ರಕ್ಕೆ ರವಾನಿಸಿರುತ್ತಾರೆ. ದೂರುದಾರರ ಸಮಸ್ಯೆಗಳಿಗೆ ಪರಿಹಾರ ಕಂಡ ತಕ್ಷಣ ಕೇಂದ್ರವು ಸಾರ್ವಜನಿಕರು ಬಳಸಿದ ಸಾಮಾಜಿಕ ಜಾಲ ತಾಣದ ಮೂಲಕ ಉತ್ತರ ನೀಡಲಿದ್ದಾರೆ.

ಕೆಲವು ಸಂದರ್ಭಗಳಲ್ಲಿ ದೂರುದಾರರ ಸಮಸ್ಯೆಗಳು ದೀರ್ಘಾವಧಿಯ ಸಮಸ್ಯೆಗಳಾಗಿದ್ದಲ್ಲಿ ಆ ಸಮಸ್ಯೆಗಳನ್ನು ಪರಿಹರಿಸಲು ಹೆಚ್ಚಿನ ಕಾಲಾವಕಾಶ ಬೇಕಾದಲ್ಲಿ ಅದನ್ನೂ ಸಹ ದೂರುದಾರರ ಗಮನಕ್ಕೆ ತರಲಾಗುವುದು. ಪ್ರತಿಯೊಂದು ಸಂಸ್ಥೆಯಲ್ಲಿ ಹಿರಿಯ ಅಧಿಕಾರಿಗಳನ್ನು ನೋಡೆಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದ್ದು, ದೂರುಗಳ ವಿಲೇವಾರಿಯ ಮೇಲುಸ್ತುವಾರಿ ನಡೆಸಲಿದ್ದಾರೆ ಎಂದು ಸಚಿವರು ತಿಳಿಸಿದರು.

ಸಾರ್ವಜನಿಕರು ಇಲಾಖಾವಾರು ದೂರುಗಳನ್ನು ಸಲ್ಲಿಸಲು ಫೇಸ್‌ಬುಕ್ ಮತ್ತು ಟ್ವಿಟರ್ ಮಾಧ್ಯಮ ಉಪಯೋಗಿಸಬಹುದಾದ ಐಡಿಗಳನ್ನು ಸಹಾ ಸಚಿವರು ಈ ಸಂದರ್ಭದಲ್ಲಿ ಬಿಡುಗಡೆಗೊಳಿಸಿದರು.

ಬೆಂಗಳೂರು ಮಹಾನಗರಪಾಲಿಕೆ ಸಂಬಂಧಿಸಿದ ದೂರುಗಳನ್ನು

**Facebook: https://www.facebook.com/bbmp.comm**
**Twitter: http://twitter.com/BBMPCOMM1**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ ದೂರುಗಳನ್ನು
**Facebook: https://www.facebook.com/pg/BDABLR/**
**Twitter: http://twitter.com/bdablr**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸಂಬಂಧಿಸಿದ ದೂರುಗಳನ್ನು
**Facebook: https://www.facebook.com/bangalorewatersupply**
**Twitter: http://twitter.com/chairmanbwssb**

ಬೆಂಗಳೂರು ಮೆಟ್ರೋ ರೈಲು ನಿಗಮ ಸಂಸ್ಥೆಗಳಿಗೆ ಸಂಬಂಧಿಸಿದ ದೂರುಗಳನ್ನು
**Facebook: https://Facebook:https://twitter.com/cpronammametro**
**Twitter: http://www.facebook.com/BMRCL**

ಬೆಂಗಳೂರು ನಗರಾಭಿವೃದ್ಧಿ ಸಚಿವರ ಗಮನಕ್ಕೆ ದೂರುಗಳನ್ನು ಸಲ್ಲಿಸಲು
**Facebook: https://www.facebook.com/blrdevminister**
**Twitter: https://twitter.com/blrdevminister**

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮಹೇಂದ್ರ ಜೈನ್, ಬಿ.ಬಿ.ಎಂ.ಪಿ. ಆಯುಕ್ತ ಮಂಜುನಾಥ ಪ್ರಸಾದ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಾಕೇಶ್ ಸಿಂಗ್, ಬೆಂಗಳೂರು ಮೆಟ್ರೋ ರೈಲು ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್‌ಸಿಂಗ್ ಖರೋಲ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆಪಿಪಿ/ಕೆಎಂ.

**ಸಂಖ್ಯೆ:194 /314**

## <u>ಕೃಷಿಯನ್ನು ವೈಜ್ಞಾನಿಕವಾಗಿ ಮಾಡುವಲ್ಲಿ ಕೃಷಿ ವಿಜ್ಞಾನಿಗಳ ಪಾತ್ರ ಅತೀ ಮುಖ್ಯ – ವಿಶ್ರಾಂತ ಮುಖ್ಯ ನ್ಯಾಯಧೀಶ ಎಂ.ಎನ್. ವೆಂಕಟಾಚಲಯ್ಯ</u>

ಬೆಂಗಳೂರು, ಅಕ್ಟೋಬರ್ 16 ( ಕರ್ನಾಟಕ ವಾರ್ತೆ) :

ಭಾರತದಲ್ಲಿ ಕೃಷಿಗೆ ಸಂಬಂಧಿಸಿದಂತೆ ಹಲವು ಆಯಾಮಗಳಲ್ಲಿ ಸಮಸ್ಯೆಗಳಿದ್ದು ಕೃಷಿಯನ್ನು ವೈಜ್ಞಾನಿಕವಾಗಿ ಮಾಡುವಲ್ಲಿ ಕೃಷಿ ವಿಜ್ಞಾನಿಗಳ ಪಾತ್ರ ಅತೀ ಮುಖ್ಯವಾಗಿದೆ ಎಂದು ಭಾರತದ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ಮುಖ್ಯ ನ್ಯಾಯಧೀಶ ಎಂ.ಎನ್. ವೆಂಕಟಾಚಲಯ್ಯ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಇಂದು ಪಶು ವೈದ್ಯಕೀಯ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿಶ್ವ ಆಹಾರ ದಿನಾಚರಣೆ – 2017 ಹಾಗೂ ರಾಷ್ಟ್ರೀಯ ವಿಚಾರ ಸಂಕಿರಣ" ವನ್ನು ಉದ್ಘಾಟಿಸಿ ಮಾತನಾಡಿದ ಅವರು ಭಾರತ ಕೃಷಿ ಪ್ರಧಾನ ದೇಶವಾಗಿದ್ದರೂ ಜನಸಂಖ್ಯೆ ಬೆಳೆದ ವೇಗದಲ್ಲಿ ಕೃಷಿ ಬೆಳವಣಿಗೆ ಆಗಲಿಲ್ಲ, ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಭದ್ರತೆಯಲ್ಲಿ ಸ್ವಾವಲಂಭನೆ ಹೊಂದಿಲ್ಲದಿರುವುದು ಅತ್ಯಂತ ಕಳವಳಕಾರಿ ವಿಷಯವಾಗಿದೆ.

ಸ್ವಾತಂತ್ರ್ಯ ಸಮಯದಲ್ಲಿ ವಿದ್ಯುತ್ ಭಾರತಕ್ಕೆ ಪಾದಾರ್ಪಣೆ ಮಾಡಿ ಇಂದು ದೇಶವೇ ವಿದ್ಯುತ್‌ನಿಂದ ಬೆಳಗುತ್ತಿದೆ. ಅದೇ ರೀತಿ ಸಾವಿರಾರು ವರ್ಷಗಳಿಂದ ಮನುಷ್ಯ ತನ್ನ ಆಹಾರಕ್ಕಾಗಿ ಕಂಡುಕೊಂಡಿರುವ ಕೃಷಿ ಕ್ರಾಂತಿ ಅತ್ಯಂತ ಹಿಂದುಳಿದಿದೆ. ಇನ್ನೇನು ಕೆಲವೇ ವರ್ಷಗಳಲ್ಲಿ ಪೆಟ್ರೋಲ್ ಅನ್ನು ಸೋಲಾರ್ ಶಕ್ತಿ ಆವರಿಸಿಕೊಳ್ಳಲಿದೆ. ಈ ರೀತಿಯ ವೈಜ್ಞಾನಿಕ ನೆರವು ಕೃಷಿ ಕ್ಷೇತ್ರದಲ್ಲಿ ಆಗಬೇಕು ಎಂದು ಹೇಳಿದರು.

ಆಹಾರದಲ್ಲಿ ಸ್ವಾವಲಂಭನೆಯಾಗಲು ಕೃಷಿ ವಿಜ್ಞಾನಿಗಳು ಹಾಗೂ ವಿಶ್ವವಿದ್ಯಾಲಯಗಳು ರೈತರೊಂದಿಗೆ ಕೈಜೋಡಿಸಿ ವೈಜ್ಞಾನಿಕ ಕೃಷಿಗೆ ಹೆಚ್ಚಿನ ಒತ್ತನ್ನು ನೀಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ " ಅನ್ನದೇವೋಭವ " ಸ್ಮರಣ ಸಂಚಿಕೆಯನ್ನು ಆದಮ್ಯ ಚೇತನ ವ್ಯವಸ್ಥಾಪಕ ಟ್ರಸ್ಟಿ ಡಾ. ತೇಜಸ್ವಿನಿ ಅನಂತಕುಮಾರ್ ಅವರು ಬಿಡುಗಡೆ ಮಾಡಿದರು.

"ಆಹಾರ ಭದ್ರತೆ ಹಾಗೂ ಸುಸ್ಥಿರ ಗ್ರಾಮೀಣಾಭಿವೃದ್ಧಿಗಾಗಿ ಭವಿಷ್ಯದ ಗ್ರಾಮೀಣ ವಲಸೆಯನ್ನು ಬದಲಾಯಿಸುವುದು" ವಿಷಯ ಕುರಿತು ಭಾರತ ಕೃಷಿ ಅನುಸಂಧಾನ ಪರಿಷತ್ ವಿಶ್ರಾಂತ ಮಹಾನಿರ್ದೇಶಕ ಡಾ.. ಎಸ್. ಅಯ್ಯಪ್ಪನ್ ಅವರು ವಿಷಯ ಮಂಡನೆ ಮಾಡಿದರು.

ಆಹಾರ ಆಯೋಗದ ಅಧ್ಯಕ್ಷ ಡಾ. ಎನ್. ಕೃಷ್ಣಮೂರ್ತಿ, ಅಲ್ಯೂಮ್ನಿ ಅಸೋಸಿಯೇಷನ್ ಅಧ್ಯಕ್ಷ ಡಾ. ಕೆ. ನಾರಾಯಣಗೌಡ, ಡಾ. ಶ್ರೀನಿವಾಸ ಗೌಡ, ರಾಜೇಂದ್ರ ಪಾಟೀಲ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಎಸ್‌ಎಂ;ಜೆಡಿ:ಜಿಪಿಆರ್.

**ಸಂಖ್ಯೆ:195 /315**

**ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹಕ್ಕೆ ರೂ 1900 ಲಕ್ಷ ಅನುದಾನ**

ಬೆಂಗಳೂರು, ಅಕ್ಟೋಬರ್ 16 ( ಕರ್ನಾಟಕ ವಾರ್ತೆ) :

ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹವನ್ನು ಖ್ಯಾತ ವಿಜ್ಞಾನಿ ಭಾರತರತ್ನ ಪ್ರೊ. ಸಿ.ಎನ್.ಆರ್. ರಾವ್ ಅವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಗಿದ್ದು, ಸರ್ಕಾರವು 2016-17 ನೇ ಆಯವ್ಯಯದಲ್ಲಿ ಇದಕ್ಕೆ 1900 ಲಕ್ಷ ರೂ. ಗಳನ್ನು ಒದಗಿಸಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಯೋಜನೆ ಸಾಂಖ್ಯಿಕ, ಜೈವಿಕ ತಂತ್ರಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನದ ಸಚಿವ ಎಂ.ಆರ್. ಸೀತಾರಾಮ್ ಅವರು ತಿಳಿಸಿದರು.

ಅವರು ಇಂದು ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರರು.

ಈ ಸಮೂಹವು 2008 ರಲ್ಲಿ ರಚನೆಗೊಂಡಿದ್ದು, ರಾಜ್ಯದ ಆರ್ಥಿಕ ವಲಯದ ವಿವಿಧ ಕ್ಷೇತ್ರಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅಳವಡಿಕೆ, ನೀತಿ ರೂಪಿಸುವಲ್ಲಿ ಇದು ಸಹಕಾರಿಯಾಗಿದೆ. ಇದರಲ್ಲಿ ವಿಜ್ಞಾನಿಗಳು, ಶಿಕ್ಷಣ ತಜ್ಞರು ಹಾಗೂ ಉದ್ಯಮಿಗಳು ಇದ್ದಾರೆ ಎಂದರು.

ಈ ದಾರ್ಶನಿಕ ಸಮೂಹದಲ್ಲಿ 2016-17 ನೇ ಸಾಲಿಗೆ 7 ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅಲ್ಲದೆ ವಿವಿಧ ಭಾಗಗಳಿಂದ ಒಟ್ಟು 1260 ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದ್ದು, ತಜ್ಞ ವಿಜ್ಞಾನಿಗಳಿಂದ ಪರೀಕ್ಷಿಸಿದ ನಂತರ 143 ಯೋಜನೆಗಳಿಗೆ ಧನಸಹಾಯ ನೀಡಲಾಗುತ್ತಿದೆ.

ಈ ಕಾರ್ಯಚಟುವಟಿಕೆಗಳು 7 ವಿಭಾಗದಲ್ಲಿ ರೂಪುಗೊಂಡು ರಾಜ್ಯಾದ್ಯಂತ ಅನುಷ್ಠಾನಗೊಳ್ಳುತ್ತಿವೆ. ವಿಜ್ಞಾನ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶ್ರೇಷ್ಠ ಕೇಂದ್ರಗಳ ಸ್ಥಾಪನೆಗೆ 180 ಲಕ್ಷ ರೂ. ಗಳನ್ನು ಮೀಸಲಿಡಲಾಗಿದೆ. ಈ ಕಾರ್ಯಕ್ರಮದಡಿ ಒಂದು ಕೇಂದ್ರೀಕೃತ ವೈಜ್ಞಾನಕ ವಿಷಯದಡಿ ಸಂಶೋಧನೆ ಕೈಗೊಳ್ಳಬೇಕಾಗಿರುತ್ತದೆ. ರಾಜ್ಯದ ಪದವಿ ಮಹಾವಿದ್ಯಾಲಯಗಳು, ವಿಶ್ವವಿದ್ಯಾಲಯಗಳ ವಿಜ್ಞಾನ ವಿಭಾಗಗಳು, ಸಂಶೋಧನಾ ಸಂಸ್ಥೆಗಳು ಈ ಅನುದಾನದ ನೆರವನ್ನು ಪಡೆದುಕೊಳ್ಳಬಹುದು. (ಈ ಯೋಜನೆಗೆ ವರ್ಷಕ್ಕೆ ರೂ 20 ಲಕ್ಷಗಳಂತೆ 3 ವರ್ಷಗಳು 60 ಲಕ್ಷ ರೂ. ನೀಡಲಾಗುವುದು.)

ವಿಜ್ಞಾನ ಶಿಕ್ಷಣ ಸೃಜನಶೀಲ ಕೇಂದ್ರಗಳ ಸ್ಥಾಪನೆಗೆ ರೂ 240 ಲಕ್ಷ ಮೀಸಲಿಡಲಾಗಿದ್ದು ಈ ಕಾರ್ಯಕ್ರಮದಡಿ ಗುಣಮಟ್ಟದ ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯ, ಬೋಧನೆ, ಕೌಶಲ್ಯಾಭಿವೃದ್ಧಿ, ಮೂಲಭೂತ, ಅನ್ವಯಿಕ ವೈಜ್ಞಾನಿಕ ಸಮಸ್ಯೆಗಳ ಕುರಿತ ಸಂಶೋಧನೆಗೆ ಪ್ರೋತ್ಸಾಹ ನೀಡಲಾಗುವುದು. ರಾಜ್ಯದಲ್ಲಿ ವಿಜ್ಞಾನ ಮತ್ತು ಇಂಜಿನಿಯರಿಂಗ್ ಪದವಿ ನೀಡುವ ಕಾಲೇಜುಗಳಿಗೆ ಈ ನೆರವು ನೀಡಲಾಗುವುದು. (ಪ್ರತಿ ಯೋಜನೆಗೆ ರೂ 10 ಲಕ್ಷ ಗಳಂತೆ 3 ವರ್ಷಗಳಿಗೆ 30 ಲಕ್ಷ ರೂ. ಅನುದಾನ ನೀಡಲಾಗುವುದು) ಯುವ ವಿಜ್ಞಾನಿಗಳಿಗೆ

ಸಂಶೋಧನೆಗಾಗಿ 200 ಲಕ್ಷ ರೂ. (ಒಂದು ಸಂಶೋಧನೆಗೆ 5 ಲಕ್ಷ ರೂ.) ಸಂಶೋಧನಾ ಪ್ರಬಂಧಗಳಿಗೆ ಪ್ರಶಸ್ತಿ– 5 ಲಕ್ಷ ರೂ (ತಲಾ ರೂ. 25 ಸಾವಿರ ಪ್ರಶಸ್ತಿ) ಇಂಜಿನಿಯರಿಂಗ್ ಕಾಲೇಜುಗಳ ಬೋಧಕರಿಗೆ ತರಬೇತಿ ಕಾರ್ಯಗಳು – 30 ಲಕ್ಷ ರೂ. (ತಲಾ 2 ಲಕ್ಷ ರೂ. ಗಳಂತೆ 15 ವಿದ್ಯಾಸಂಸ್ಥೆಗಳಿಗೆ ಅನುದಾನ ನೀಡಲಾಗುವುದು).ವಿಜ್ಞಾನ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಪ್ರತಿಭಾವಂತ ಶಿಕ್ಷಕರ ಸಂಶೋಧನಾ ನಿಧಿ – 100 ಲಕ್ಷ ರೂ. (ಒಬ್ಬರಿಗೆ ತಲಾ 5 ಲಕ್ಷ ರೂ.) ಅಲ್ಲದೆ, ಕರ್ನಾಟಕ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲ ಸೌಕರ್ಯಅಭಿವೃದ್ಧಿ ನಿಧಿಗೆ 1100 ಲಕ್ಷ ರೂ. ಮೀಸಲಿಡಲಾಗಿದೆ. ಇದರಲ್ಲಿ ರಾಜ್ಯದ ವಿಶ್ವ ವಿದ್ಯಾಲಯಗಳ ವಿಜ್ಞಾನದ ವಿಭಾಗಗಳು ಮತ್ತು ಅರ್ಹ ಉನ್ನತ ಸಂಸ್ಥೆಗಳು ಸ್ನಾತಕೋತ್ತರ ಹಂತದಲ್ಲಿ ವಿಜ್ಞಾನ ಬೋಧನೆ ಮತ್ತು ಸಂಶೋಧನೆಗೆ ಈ ಅನುದಾನದ ನೀಡಲಾಗುವುದು. ಈ ಕೆ. ಫಿಸ್ಟ್ ಕಾರ್ಯಕ್ರಮದ ಉದ್ದೇಶವೆಂದರೆ ಪ್ರಯೋಗಾಲಯಗಳಲ್ಲಿ ಸೌಕರ್ಯ ಒದಗಿಸುವುದರ ಜೊತೆಗೆ ಉನ್ನತೀಕರಣ, ನೆಟ್‌ವರ್ಕಿಂಗ್ ಹಾಗೂ ಕಂಪ್ಯೂಟೇಷನಲ್ ಸೌಕರ್ಯ ಒದಗಿಸಲಾಗುವುದೆಂದರು. ಸದ್ಯದಲ್ಲಿಯೇ ಮಂಗಳೂರಿನಲ್ಲಿ ಡಿಜಿಟಲ್ 3ಡಿ ತಾರಾಲಯವನ್ನು ಸಹ ಸ್ಥಾಪಿಸಲಾಗುವುದೆಂದು ಅವರು ತಿಳಿಸಿದರು.

ಕವನ:ಜಿಪಿಆರ್.

**ಸಂಖ್ಯೆ:196 /316**

## 2017–18 ನೇ ಸಾಲಿನ "ಕರ್ನಾಟಕ ಕಲಾಶ್ರೀ" ಪ್ರಶಸ್ತಿ ಪ್ರಕಟ

ಬೆಂಗಳೂರು, ಅಕ್ಟೋಬರ್ 16 ( ಕರ್ನಾಟಕ ವಾರ್ತೆ) :

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 2017–18 ನೇ ಸಾಲಿನ "ಕರ್ನಾಟಕ ಕಲಾಶ್ರೀ" ಪ್ರಶಸ್ತಿಗಾಗಿ ಕಲಾವಿದರನ್ನು ಆಯ್ಕೆ ಮಾಡಲು ಕಲಾವಿದರ ಸೇವಾ ಹಿರಿತನ, ಸಣ್ಣ ವಯಸ್ಸಿನಲ್ಲಿ ರಾಜ್ಯ, ರಾಷ್ಟ್ರಮಟ್ಟದ ಸಾಧನೆ, ಶಿಷ್ಯರನ್ನು ತಯಾರು ಮಾಡಿರುವುದು, ಗ್ರಂಥಗಳ ರಚನೆ, ಜಿಲ್ಲಾವಾರು ಪ್ರಾತಿನಿಧ್ಯ ಇವುಗಳನ್ನೆಲ್ಲಾ ಕೂಲಂಕುಷವಾಗಿ ಚರ್ಚಿಸಿ, ಪರಿಶೀಲಿಸಿ ಸಮಿತಿಯು ಸರ್ವಾನುಮತದಿಂದ ಕಲಾವಿದರನ್ನು ಆಯ್ಕೆಮಾಡಿದೆ. ಪ್ರಶಸ್ತಿಗೆ ಅರ್ಹರಾದವರ ಪಟ್ಟಿ ಇಂತಿದೆ.

ಗೌರವ ಪಶಸ್ತಿ:

ಕರ್ನಾಟಕ ಸಂಗೀತ-ಹಾಡುಗಾರಿಕೆಯಲ್ಲಿ ಮೈಸೂರಿನ ಡಾ. ಸುಕನ್ಯಾ ಪ್ರಭಾಕರ ಹಾಗೂ ನೃತ್ಯದಲ್ಲಿ ಮಂಗಳೂರಿನ ಶ್ರೀಮತಿ ಶಾರದಾ ಮಣಿ ಶೇಖರ್, ಆಯ್ಕೆಯಾಗಿದ್ದಾರೆ.

ವಾರ್ಷಿಕ ಪ್ರಶಸ್ತಿಗಳಾದ:

ಕರ್ನಾಟಕ ಸಂಗೀತ:

ಹಾಡುಗಾರಿಕೆಯಲ್ಲಿ ಕೋಲಾರದ ರಾಮಪ್ಪ ನಾಯ್ಡು, ವೀಣೆಯಲ್ಲಿ ಮೈಸೂರಿನ ಡಾ. ಬಿ.ಎಸ್. ವಿಜಯರಾಘವನ್, ನಾದಸ್ವರದಲ್ಲಿ ಭದ್ರಾವತಿಯ ಕೆ.ಎಸ್. ಮೋಹನ್ ಕುಮಾರ್ ಅವರು ಆಯ್ಕೆಯಾಗಿದ್ದಾರೆ.

ಹಿಂದೂಸ್ತಾನಿ ಸಂಗೀತ:

ಬಾನ್ಸುರಿಯಲ್ಲಿ ಹೊನ್ನಾವರದ ಶಂಭು ಭಟ್ ಕಡತೊಕ, ಗಾಯನದಲ್ಲಿ ಕುಂದಗೋಳದ ಹುಸೇನಸಾಬ್ ನದಾಫ್ ಹಾಗೂ ರಾಯಚೂರಿನ ರಾಮಾಚಾರ್ಯ ಕಾಖಂಡಕಿ, ಶಹನಾಯಿಯಲ್ಲಿ ಅಮರಾವತಿಯ ಬಸಪ್ಪ ಹೆಚ್ ಭಜಂತ್ರಿ ಅವರುಗಳು ಆಯ್ಕೆಯಾಗಿದ್ದಾರೆ.

ನೃತ್ಯ:

ಬೆಂಗಳೂರಿನ ಡಾ. ಸುಪರ್ಣಾ ವೇಕಟೇಶ್ ಹಾಗೂ ಎಸ್. ನಾಗಭೂಷಣ್, ಶಿವಮೊಗ್ಗದ ಎಸ್. ಕೇಶವ ಕುಮಾರ್ ಅವರು ಆಯ್ಕೆಯಾಗಿದ್ದಾರೆ.

ಸುಗಮ ಸಂಗೀತ:

ಬೆಂಗಳೂರಿನ ಶ್ರೀಮತಿ ಕೆ.ಎಂ. ಕುಸುಮ ಹಾಗೂ ದಾವಣಗೆರೆಯ ಟಿ. ರಾಜಾರಾಂ ಅವರು ಆಯ್ಕೆಯಾಗಿದ್ದಾರೆ.

ಕಥಾ ಕೀರ್ತನ:

ಗದಗನ ಕಲ್ಲಿನಾಥ್ ಶಾಸ್ತ್ರಿ ಹಾಗೂ ತುರುವೇಕೆರೆಯ ಹುಲಿಕಲ್ ನಾಗರಾಜ್ ಅವರು ಆಯ್ಕೆಯಾಗಿದ್ದಾರೆ.

ಗಮಕ:

ಬೆಂಗಳೂರಿನ ಶ್ರೀಮತಿ ಸತ್ಯವತಿ ರಾಮನಾಥ್ ಅವರು ಆಯ್ಕೆಯಾಗಿದ್ದಾರೆ

ಸಂಘ ಸಂಸ್ಥೆ:

ಧಾರವಾಡದ ಭಾರತೀಯ ಸಂಗೀತ ವಿದ್ಯಾಲಯದ ಸಿತಾರ ರತ್ನ ರೆಹಮತ್ ಖಾನ್ ಅವರು ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿ ಪ್ರದಾನ ಸಮಾರಂಭವು ನವೆಂಬರ್ 26 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಲು ತೀರ್ಮಾನಿಸಲಾಗಿದ್ದು, ಗೌರವ ಪ್ರಶಸ್ತಿ ಪುರಸ್ಕೃತರಿಗೆ ರೂ 50,000/- ಗೌರವಧನ, ವಾರ್ಷಿಕ ಪ್ರಶಸ್ತಿ ಪುರಸ್ಕೃತರಿಗೆ ರೂ 25,000/- ಗಳ ಗೌರವಧನ, ಶಾಲು, ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರ, ಹಾರ, ಫಲ-ತಾಂಬೂಲಗಳನ್ನು "ಕರ್ನಾಟಕ ಕಲಾಶ್ರೀ" ಪ್ರಶಸ್ತಿಯೊಂದಿಗೆ ನೀಡಿ ಗೌರವಿಸಲಾಗುವುದು.

ಎಸ್‌ಎಂ;ಜೆಡಿ:ಜಿಪಿಆರ್.

**ಸಂಖ್ಯೆ:197 /317**

## ಲಲಿತಾಕಲಾ ಅಕಾಡೆಮಿ ಅಧ್ಯಕ್ಷರಾಗಿ ಎಂ. ಜೆ. ಕಮಲಾಕ್ಷಿ ನೇಮಕ

ಬೆಂಗಳೂರು, ಅಕ್ಟೋಬರ್ 16 ( ಕರ್ನಾಟಕ ವಾರ್ತೆ) :

ಕರ್ನಾಟಕ ಲಲಿತಕಲಾ ಅಕಾಡೆಮಿಯ ನೂತನ ಅಧ್ಯಕ್ಷರಾಗಿ ನಾಡಿನ ಹಿರಿಯ ಕಲಾವಿದೆ ಶ್ರೀಮತಿ ಎಂ. ಜೆ. ಕಮಲಾಕ್ಷಿ ಅವರನ್ನು ನೇಮಕಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಉಮಾಶ್ರೀ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

**ಸಂಖ್ಯೆ:197 /317**

## ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಬೆಂಗಳೂರು, ಅಕ್ಟೋಬರ್ 16 ( ಕರ್ನಾಟಕ ವಾರ್ತೆ) :

ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ 2017-18ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ "ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ", ವಿದ್ಯಾಸಿರಿ- "ಊಟ ಮತ್ತು ವಸತಿ ಸಹಾಯ ಯೋಜನೆ" ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸ್ನಾತಕೋತ್ತರ ಕೋರ್ಸ್‌ಗಳಾದ ಎಂಬಿಎ, ಎಂಸಿಎ, ಎಂಟೆಕ್ ಮುಂತಾದ ತಾಂತ್ರಿಕ ಕೋರ್ಸ್‌ಗಳ ದಾಖಲಾತಿ ಪ್ರಕ್ರಿಯೆ ಕಾರ್ಯ ಸೆಪ್ಟೆಂಬರ್ ಅಂತ್ಯಕ್ಕೆ ಪೂರ್ಣಗೊಳ್ಳದೆ ಇರುವುದರಿಂದ, ಕೆಲವು ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸುವಂತೆ ಶಿಕ್ಷಣ ಸಂಸ್ಥೆಯವರು ಮತ್ತು ವಿದ್ಯಾರ್ಥಿಗಳು ಕೋರಿರುತ್ತಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸುವ ದಿನಾಂಕವನ್ನು ಅಕ್ಟೋಬರ್ 19 ರವರೆಗೆ ವಿಸ್ತರಿಸಲಾಗಿದೆ.

ಅರ್ಜಿಯನ್ನು ಆನ್‌ಲೈನ್ ಮೂಲಕ **kareepass.cgg.gov.in** ಹಾಗೂ **www.backwardclasses.kar.nic.in** ನಲ್ಲಿ ಸಲ್ಲಿಸಬಹುದು.

ಕಾರ್ಯಕ್ರಮಗಳ ವಿವರ, ಸೌಲಭ್ಯ ಪಡೆಯಲು ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ಕಾರ್ಯಕ್ರಮಗಳ ಸರ್ಕಾರಿ ಆದೇಶಗಳಿಗಾಗಿ ಇಲಾಖೆ ವೆಬ್‌ಸೈಟ್ ನಲ್ಲಿ ನೋಡಬಹುದು. ಸಹಾಯವಾಣಿ ಸಂ. 080–65970005 ಹಾಗೂ 080–65970006 ಮೂಲಕ ಸಂಪರ್ಕಿಸಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

**ಸಂಖ್ಯೆ:198 /318**

## ಯಕ್ಷಗಾನ ತರಬೇತಿಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ಅಕ್ಟೋಬರ್ 16 ( ಕರ್ನಾಟಕ ವಾರ್ತೆ) :

ಕರ್ನಾಟಕ ಯಕ್ಷಗಾನ ಅಕಾಡೆಮಿಯು ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದ ಶಿಬಿರಾರ್ಥಿಗಳಿಗೆ 2017–18ನೇ ಸಾಲಿನಲ್ಲಿ ಯಕ್ಷಗಾನ ತರಬೇತಿ ಶಿಬಿರಗಳನ್ನು ನಡೆಸಲು ಉದ್ದೇಶಿಸಿದೆ. ಯಕ್ಷಗಾನ ಕಲಾಪ್ರಕಾರಗಳಾದ ತೆಂಕುತಿಟ್ಟು/ಬಡಗುತಿಟ್ಟು, ಬಡಾಬಡಗುತಿಟ್ಟು ಯಕ್ಷಗಾನ, ಮೂಡಲಪಾಯ ಯಕ್ಷಗಾನ, ತಾಳಮದ್ದಲೆ, ಯಕ್ಷಗಾನ ಗೊಂಬೆಯಾಟ ಇತ್ಯಾದಿ ಕಲಾಪ್ರಕಾರಗಳಲ್ಲಿ 40 ಶಿಬಿರಾರ್ಥಿಗಳಿಗೆ ತರಬೇತಿ ನೀಡಬಯಸುವ ಹಿರಿಯ ಕಲಾವಿದರುಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ತರಬೇತಿ ನಡೆಸುವ ಗುರುಗಳು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. 40 ಶಿಬಿರಾರ್ಥಿಗಳೂ ಪರಿಶಿಷ್ಟ ಪಂಗಡದವರಾಗಿರಬೇಕು. ಗುರುಗಳ ಮತ್ತು ಶಿಬಿರಾರ್ಥಿಗಳ ಜಾತಿ ಪ್ರಮಾಣ ಪತ್ರಗಳೊಂದಿಗೆ ಅರ್ಜಿ ಸಲ್ಲಿಸಲು ತಿಳಿಸಿದೆ.

ತರಬೇತಿ ನೀಡಬಯಸುವ ಆಸಕ್ತ ಕಲಾವಿದರುಗಳು ಅರ್ಜಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಕನ್ನಡ ಭವನ, 2 ನೇ ಮಹಡಿ, ಚಾಲುಕ್ಯ ವಿಭಾಗ, ಜೆ.ಸಿ. ರಸ್ತೆ, ಬೆಂಗಳೂರು – 560 002 ಇಲ್ಲಿಗೆ ಕಳುಹಿಸಿಕೊಡಬೇಕಾಗಿ ಕೋರಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31.10.2017. ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯನ್ನು ಸಂಪರ್ಕಿಸಬಹುದಾಗಿದೆ. (ಕಚೇರಿ ದೂರವಾಣಿ – 080–22112146).

ಎಸ್‌ಎಂ:ಜೆಡಿ:ಜಿಪಿಆರ್.